**ಸಾಕ್ಷಿಗೆ ದಿನಾಂಕಃ15-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು :: ಆರೋಪಿ ಪರ ಶ್ರೀ. KMM ವಕೀಲರಿಂದ ::**

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಮರಿಯಪ್ಪ ಎನ್ನುವವರು ನಮ್ಮ ಗ್ರಾಮಸ್ಥರು ಹಾಗೂ ಸಂಬಂಧಿಕರಾಗಿರುತ್ತಾರೆ. ನನಗೆ ಅತ್ತಿಗಟ್ಟೆ ಸರ್ವೇ ನಂಬರ್ 70/1 ರಲ್ಲಿ ಎರಡುವರೆ ಎಕರೆ ಅಡಿಕೆ ತೋಟ ಇರುತ್ತದೆ. ನನಗೆ ವ್ಯಾಪಾರದ ಜ್ಞಾನ ಇರುತ್ತದೆ ಎಂದರೆ ಸರಿ. ನಾನು ಆರೋಪಿಗೆ ಎಷ್ಟು ತೂಕದ ಅಡಿಕೆಯನ್ನು ನೀಡಿದ್ದು ಮತ್ತು ಅದರ ಮೌಲ್ಯದ ಬಗ್ಗೆ ನನ್ನ ಹಾಗೂ ಆರೋಪಿ ನಡುವೆ ಬರವಣಿಗೆ ಆಗಿರುವುದಿಲ್ಲ, ಕೇವಲ ಮಾತುಕತೆಯಲ್ಲಿ ಸದರಿ ವ್ಯವಹಾರ ಆಗಿರುತ್ತದೆ. ಆ ರೀತಿ ನನ್ನ ಮತ್ತು ಆರೋಪಿ ನಡುವೆ ಆದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾವು ಬರವಣಿಗೆ ಮಾಡಿಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆದರೆ ನನ್ನ ಹಾಗೂ ಆರೋಪಿ ನಡುವೆ ಹಿಂದಿನಿಂದ ವ್ಯವಹಾರ ಇದ್ದ ಕಾರಣ ಬರವಣಿಗೆ ಮಾಡುವ ಅವಶ್ಯಕತೆ ಇರಲಿಲ್ಲ. ಮೂರ್ತಪ್ಪ ರವರು ಸಹ ನಮ್ಮ ಗ್ರಾಮಸ್ಥರು ಹಾಗೂ ನಮ್ಮ ಸಂಬಂಧಿಕರು. ಸದರಿ ಮೂರ್ತಪ್ಪನ ಹೆಂಡತಿ ಶಿವಲಿಂಗಮ್ಮ ಆರೋಪಿ ಅಕ್ಕ ಆಗಿರುತ್ತಾರೆ ಎಂದರೆ ಸರಿ. ಕುಟುಂಬದ ವಿಚಾರದಲ್ಲಿ ನಮ್ಮ ಕುಟುಂಬಕ್ಕೂ ಹಾಗೂ ಆರೋಪಿ ಕುಟುಂಬಕ್ಕೂ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಮನೆಗೆ ಆರೋಪಿ ಗ್ರಾಮಸ್ಥರು ನುಗ್ಗಿದ ಸಮಯದಲ್ಲಿ ನಾನು ಚೀರನಹಳ್ಳಿಯಲ್ಲಿ ವಾಸವಾಗಿದ್ದೆ. ಆರೋಪಿಯ ಮಗ ಮೃತರಾದ ಸಮಯದಲ್ಲಿ ಅವರ ಅಂತಿಮ ಸಂಸ್ಕಾರಕ್ಕೆ ನಾನು ಹೋಗಿರುವುದಿಲ್ಲ. ನಾನು ಆರೋಪಿಗೆ ಸಂಬಂಧಿಕ ಆಗಿದ್ದರೂ ಸಹ ನನ್ನ ಹಾಗೂ ಆರೋಪಿ ನಡುವೆ ದ್ವೇಷ ಇದ್ದ ಕಾರಣ ಹೋಗಿರುವುದಿಲ್ಲ ಎಂದರೆ

ಸರಿಯಲ್ಲ. ಆರೋಪಿ ಮನೆಗೆ ನುಗ್ಗಿದ ವ್ಯಕ್ತಿಗಳು ಆರೋಪಿಗೆ ಸಂಬಂಧಿಸಿದ ಚೆಕ್ ಅನ್ನು ಕಳವು ಮಾಡಿ ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯೇ ಚೆಕ್ ಅನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ ಅನ್ನು ಬ್ಯಾಂಕ್ ಗೆ ಹಾಜರುಪಡಿಸಲು ನನಗೆ ಯಾರು ಮಾಹಿತಿ ನೀಡಿರುವುದಿಲ್ಲ, ನಾನೇ ಹಾಜರುಪಡಿಸಿರುತ್ತೇನೆ. ನಮ್ಮ ಗ್ರಾಮದಲ್ಲಿ TUMCOS ಇರುತ್ತದೆ. ಸದರಿ ಸಂಸ್ಥೆಯಲ್ಲಿ ನಾನು ಸದಸ್ಯನಾಗಿರುವುದಿಲ್ಲ. MAMCOS ಮತ್ತು TUMCOS ಗಳು ಚೆನ್ನಗಿರಿ ಹಾಗೂ ತಾವರೆಕೆರೆಯಲ್ಲಿ ಇರುತ್ತವೆ. ನಾನು ಸದರಿ ಸಂಸ್ಥೆಯಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಈ ಪ್ರಕರಣವನ್ನು ನನ್ನ ಮಾಹಿತಿಯ ಮೇರೆಗೆ ಹಾಕಿರುವುದಿಲ್ಲ, ಬೇರೆಯವರ ಮಾಹಿತಿ ಮೇರೆಗೆ ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಹೇಳಿದಂತೆ ನನ್ನ ಹಾಗೂ ಆರೋಪಿ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ, ಆದರೆ ಆಂಗ್ಲ ಭಾಷೆ ಬರುವುದಿಲ್ಲ. ಆರೋಪಿಗೆ ನಿಪಿ1 ಚೆಕ್ ಅನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿ ಕನ್ನಡ ಭಾಷೆಯಲ್ಲಿ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಆಂಗ್ಲ ಭಾಷೆ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿಪಿ1 ರಲ್ಲಿ ಕಂಡು ಬರುವ ಸಹಿ ಹೊರತುಪಡಿಸಿ ಇರುವ ಇತರೇ ಅಂಶಗಳ ಕೈ ಬರಹ ಯಾರದೆಂದು ನನಗೆ ಹೇಳಲು ಆಗುವುದಿಲ್ಲ. ನಿಪಿ1 ರಲ್ಲಿ ಕಂಡು ಬರುವ ಸಹಿ ಹಾಗೂ ಬರವಣಿಗೆಯ ಇಂಕ್ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನಾನು ಆರೋಪಿಯನ್ನು 10-12 ವರ್ಷಗಳಿಂದ ನೋಡುತ್ತಾ ಬಂದಿರುತ್ತೇನೆ. ನನ್ನನ್ನು ಶಿವಮೂರ್ತಿ ಹಾಗೂ ಮೂರ್ತಪ್ಪ ಎಂದು ಜನ ಕರೆಯುತ್ತಾರೆ. ನಾನು ನಿಪಿ1 ಚೆಕ್ ನಲ್ಲಿ ನನ್ನ ಹೆಸರನ್ನು ಶಿವಮೂರ್ತಿ ಎಂದು ಬರೆಸಿರುತ್ತೇನೆ ಎಂದರೆ ಸರಿ. ಸಹಿ

ಮಾಡಿರುವ ಖಾಲಿ ಚೆಕ್ ಅನ್ನು 3 ನೇ ವ್ಯಕ್ತಿ ಮುಖಾಂತರ ಪಡೆದು ಆರೋಪಿಗೆ ನಾನು ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಮರು ಉತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಮರು ಉತ್ತರದಲ್ಲಿ ಆರೋಪಿಗೂ ಹಾಗೂ ನನಗೂ ಯಾವುದೇ ಸಂಬಂಧ ಇಲ್ಲದಿದ್ದರೂ 3 ನೇ ವ್ಯಕ್ತಿ ಮುಖಾಂತರ ಅವರ ಚೆಕ್ ಪಡೆದು ಮೋಸ ಮಾಡಿರುತ್ತೀರೆಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ವಕೀಲರ ಮುಖಾಂತರ ಆರೋಪಿ ನೀಡಿದ ನೋಟೀಸ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ಪಿರ್ಯಾದಿಯಲ್ಲಿ ನಮೂದು ಮಾಡಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿಯಲ್ಲಿ ನಮೂದು ಮಾಡಿರುವ ವಿಚಾರಗಳ ನನಗೆ ಮಾಹಿತಿ ಇಲ್ಲದಿದ್ದರೂ ಇದೇ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ1 ಚೆಕ್ ಗೆ ಸಂಬಂಧಪಟ್ಟಂತೆ ನನಗೆ ಇಷ್ಟು percentage ಬರುತ್ತದೆ ಎಂದು ತಿಳಿಸಿ ಮೂರನೇ ವ್ಯಕ್ತಿ ನನಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಯಾವುದೇ percentage ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ವಿರುದ್ದ ಇತರೇ ಯಾವ ವ್ಯಕ್ತಿಗಳು ಪ್ರಕರಣ ಹೂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಹಾಗೂ ಮರಿಯಪ್ಪ ರವರು ಒಟ್ಟಿಗೆ ಬಂದಿರುತ್ತೇವೆ ಎಂದರೆ ಸರಿ. ಸದರಿ ಮರಿಯಪ್ಪ ರವರು ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ಚೆಕ್ ಅನ್ನು ನಾನು ಆರೋಪಿಯಿಂದ ಪಡೆದಿರುತ್ತೇನೆ. ಆರೋಪಿಯ ಸಹಿ ಮಾಡಿದ ಖಾಲಿ ಚೆಕ್ ಅನ್ನು ನಾನು ಇತರರಿಂದ ಪಡೆದು ನಾನೇ ಆರೋಪಿಗೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಜೊತೆ ಯಾವುದೇ ಅಡಿಕೆ ವ್ಯಾಪಾರ ಮಾಡಿರುವುದಿಲ್ಲ ಎಂದರೆ

ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಇರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: